# ಪಿಟೀಲಿನ ಕೋಲ್ಮಿಂಚು ಕಾರ್ತಿಕ್

ತಂತಿವಾದ್ಯ ಪಿಟೀಲು ನುಡಿಸಾಣಿಕೆಯಲ್ಲಿ ಯಶಸ್ಸಿನ ಮೆಟ್ಟಿಲೇರುತ್ತಾ ಹಲವು ಪ್ರತಿಷ್ಠಿತ ವೇದಿಕೆಗಳಲ್ಲಿ ಪಿಟೀಲು ಸೋಲೊ, ಜುಗಲ್‌ಬಂದಿ, ಪಕ್ಕವಾದ್ಯ ನುಡಿಸಿದ ಅನುಭವ ಮೈಸೂರು ಕಾರ್ತಿಕ್‌ಗಿದೆ. ಸಂಗೀತ ಸಾಗರದಲ್ಲಿ ಈಸಿ ಜೈಸುತ್ತಿರುವ ಈ ಯುವಪ್ರತಿಭಾನ್ವಿತ ಚಿಕ್ಕ ವಯಸ್ಸಿಗೇ ಆಕಾಶವಾಣಿಯ 'ಎ ಗ್ರೇಡ್ ಕಲಾವಿದ.

■ **ಉಮಾ ಅನಂತ್**



ಸಂಗೀತ ಸಾಧಕ ಉಸ್ತಾದ್ ರಷೀದ್ ಖಾನ್ ಅವರನ್ನು ಚಿಕ್ಕಂದಿನಿಂದಲೂ 'ಐಕಾನ್' ಎಂದೇ ಪ್ರೀತಿಸುತ್ತಾ, ಅವರ ಗಾನಮಾಧುರ್ಯಕ್ಕೆ ಮಾರುಹೋದ ಮೈಸೂರು ಕಾರ್ತಿಕ್, ಅವರನ್ನೊಮ್ಮೆ ಕಣ್ತುಂಬ ನೋಡಬೇಕೆಂಬ ಆಸೆ ಹೊತ್ತುಕೊಂಡಿದ್ದರಂತೆ. ಪಿಟೀಲು ವಾದನದ ಮೂಲಕ ಯಶಸ್ಸಿನ ಮೆಟ್ಟಿಲೇರುತ್ತಿರುವ ಕಾರ್ತಿಕ್, ಖಾನ್ ಅವರನ್ನು ನೋಡುವ ಅವಕಾಶಕ್ಕಾಗಿ ಕಾಯುತ್ತಿರುವಾಗಲೇ ಅದಕ್ಕಿಂತ ಹೆಚ್ಚಿನ ಹಾಗೂ ಕನಸುಮನಸ್ಸಿನಲ್ಲೂ ಊಹಿಸಲು ಸಾಧ್ಯವಾಗದಂತಹ ಸುಯೋಗವೊಂದು ಒದಗಿಬಂದಿತ್ತು. ಅದು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಗಣೇಶೋತ್ಸವದಲ್ಲಿ ವಿಜಯಪ್ರಕಾಶ್ ಹಾಗೂ ರಷೀದ್ ಖಾನ್ ಜುಗಲ್‌ಬಂದಿ ಗಾಯನಕ್ಕೆ ಮೊದಲ ಬಾರಿಗೆ ಪಿಟೀಲು ಪಕ್ಕವಾದ್ಯ ಸಹಕಾರ ಕೊಡುವ ಮೂಲಕ.

ಹಿಂದೂಸ್ತಾನಿ ಸಂಗೀತದಲ್ಲಿ ರಷೀದ್ ಖಾನ್ ಅವರದ್ದು ಅಸಾಧಾರಣ ಸಾಧನೆ. ಬಹುಬೇಡಿಕೆಯ ಈ ಮಹಾನ್ ಗಾಯಕನ ಹಾಡುಗಾರಿಕೆ ಕೇಳಿದವರು ಆ ಮಾಧುರ್ಯವನ್ನು ಮನತುಂಬಿ ಆಸ್ವಾದಿಸುತ್ತಾರೆ. ರಾಂಪುರ್–ಸಹಸ್ವಾನ್ 'ಗಾಯಕಿ'ಯಲ್ಲಿ ಹಾಡುವ ಉಸ್ತಾದ್‌ಜಿ ಅವರ ಹಾಡುಗಾರಿಕೆಯಲ್ಲಿನ ಸರ್ಗಂ, ತಾನ್‌ಗಳು, ಆಕಾರ್ ತಾನ್‌ಗಳು ಕೇಳುಗರನ್ನು ಹೊಸ ಮೂಡ್‌ಗೆ ಕೊಂಡೊಯ್ಯುತ್ತವೆ. ಅವರನ್ನೊಮ್ಮೆ ನೋಡಬೇಕು ಎನಿಸಿದವನಿಗೆ ಅವರೊಂದಿಗೇ ವೇದಿಕೆ ಹಂಚಿಕೊಳ್ಳುವಂತಾದದ್ದು ನಿಜಕ್ಕೂ ಸುದೈವ ಎಂದೇ ಹೇಳಬೇಕು.

ಅತ್ಯಂತ ಕಿರಿಯ ವಯಸ್ಸಿಗೆ ಅಖಿಲ ಭಾರತ ಮಟ್ಟದಲ್ಲಿ ಆಕಾಶವಾಣಿಯ ಎ ಗ್ರೇಡ್ ಕಲಾವಿದನಾಗಿ ರೂಪುಗೊಂಡ ಅಪರೂಪದ ಯುವ ಪ್ರತಿಭಾನ್ವಿತ ಮೈಸೂರು ಎನ್. ಕಾರ್ತಿಕ್. ಪಿಟೀಲಿನ ಎಳೆ ಎಳೆಯಲ್ಲೂ ಮಾಧುರ್ಯಪೂರ್ಣ ಲಯಕಾರಿ ಅಂಶಗಳನ್ನು ಲೀಲಾಜಾಲವಾಗಿ ನುಡಿಸುವ ಕಾರ್ತಿಕ್‌ಗೆ ಅವಕಾಶಗಳೂ ಸಾಲು ಸಾಲಾಗಿ ಒದಗಿಬರುತ್ತಿವೆ. ಕರ್ನಾಟಕ ಸಂಗೀತ ಮಾತ್ರವಲ್ಲದೆ ಜಾಸ್ ಸಂಗೀತವನ್ನೂ ಈ ಪುಟ್ಟ ತಂತಿವಾದ್ಯದಲ್ಲಿ ನುಡಿಸಿ ಅಕ್ಷರಶಃ 'ಪಿಟೀಲಿನ ಕೋಲ್ಮಿಂಚು' ಎನಿಸಿಕೊಂಡಿದ್ದಾರೆ.

ಅಜ್ಜನ ತೊಡೆಯ ಮೇಲೆ ಕುಳಿತು ಸಂಗೀತ ಆಲಿಸುತ್ತಾ, ಪಿಟೀಲಿನ ತಂತಿಯಿಂದ ಹೊಮ್ಮುವ ಸುಮಧುರ ನಾದದ ಜೇನಹನಿಯನ್ನು ಸ್ವಲ್ಪಸ್ವಲ್ಪವೇ ಹೀರುತ್ತಾ ಸಂಗೀತದಲ್ಲಿ ಆಸಕ್ತಿ ಬೆಳೆಸಿದವ ಆ ಪುಟ್ಟ ಬಾಲಕ. ಮಗುವಾಗಿದ್ದಾಗಲೇ ಪಿಟೀಲಿನ ತಂತಿ ಮೀಟಿದ ಷಡ್ಜ, ರಿಷಭ, ಗಾಂಧಾರ, ಪಂಚಮ, ನಿಷಾದ ಸ್ವರಗಳು ಮನದಲ್ಲೇ ರಿಂಗಣಗೊಳ್ಳುತ್ತಿತ್ತು. ಕೆಲವೇ ದಿನಗಳಲ್ಲಿ ತಾನೂ ಅದನ್ನು ಅನುಕರಣೆ ಮಾಡಿ ಅಚ್ಚರಿಮೂಡಿಸಿದ್ದ.

ಹೇಳಿಕೇಳಿ ಕಾರ್ತಿಕ್ ಹೆಸರಾಂತ ಪಿಟೀಲು ವಾದಕರಾಗಿದ್ದ ಮೈಸೂರು ಮಹದೇವಪ್ಪ ಅವರ ಮೊಮ್ಮಗ. ತಂದೆ ಮೈಸೂರು ನಾಗರಾಜ್, ಚಿಕ್ಕಪ್ಪ ಮೈಸೂರು ಮಂಜುನಾಥ್ ಪಿಟೀಲು ನುಡಿಸಾಣಿಕೆಯಲ್ಲಿ ವಿಶ್ವವೇದಿಕೆಯಲ್ಲಿ ಮಿಂಚುತ್ತಿರುವವರು. ಸಹಜವಾಗಿಯೇ ಮನೆತನದಿಂದ ಒಲಿದ ಪಾರಂಪರಿಕ ಸಂಗೀತ ಕಾರ್ತಿಕ್‌ಗೂ ರಕ್ತಗತವಾಗಿಯೇ ಕೈಹಿಡಿದಿದೆ. ಪಿಟೀಲನ್ನು ಕೈಗೆ ತೆಗೆದುಕೊಂಡು ನುಡಿಸಲಾರಂಭಿಸಿದ ಎಂದರೆ ಅದು ಅಪ್ಪನದೋ, ಚಿಕ್ಕಪ್ಪನದೋ ನುಡಿಸಾಣಿಕೆ ಎಂಬಷ್ಟು ಸ್ಪಷ್ಟತೆ, ಮಧುರಾತಿಮಧುರ.

ಪುಟ್ಟ ವಯಸ್ಸಿನಲ್ಲೇ ಸ್ವರಜತಿ, ವರ್ಣ, ಕೀರ್ತನೆಗಳನ್ನು ಅತ್ಯಂತ ಲೀಲಾಜಾಲವಾಗಿ ನುಡಿಸಿ ಪಿಟೀಲಿನ ಮೂರನೇ ತಲೆಮಾರನ್ನು ಅಷ್ಟೇ ವಿದ್ವತ್‌ಪೂರ್ಣಗೊಳಿಸುವ ಜೊತೆಗೆ ಯಶಸ್ಸಿನ ಮೆಟ್ಟಿಲನ್ನು ಹಂತಹಂತವಾಗಿ ಏರುತ್ತಾ ಕೇಳುಗರಲ್ಲಿ ಮಿಂಚಿನ ಸಂಚಾರ ಮೂಡಿಸುತ್ತಿದ್ದಾನೆ ಈ ಯುವ ಕಲಾವಿದ.

### ತಂದೆಯೇ ಗುರು

ತಂದೆ ಮೈಸೂರು ನಾಗರಾಜ್ ಅವರೇ ಮೊದಲ ಗುರು. ಕಾರ್ತಿಕ್ ಚೈಲ್ಡ್ ಪ್ರಾಡಿಜಿ. ಸಂಗೀತದ ಪಾರಂಪರಿಕ ಶಿಸ್ತಿನಿಂದಲೇ ಆರಂಭದಿಂದಲೂ ಅಭ್ಯಾಸ ಮಾಡಿದ ಕಾರ್ತಿಕ್ ಎಂಟನೇ ವಯಸ್ಸಿನಲ್ಲೇ ತನ್ನ ಪ್ರತಿಭೆಯನ್ನು ಅನಾವರಣಗೊಳಿಸಿದ. ಶಾಸ್ತ್ರೀಯ ಸಂಗೀತದ ಹಲವು ಆಯಾಮಗಳನ್ನು ನೋಡಿ, ಕೇಳಿ, ನುಡಿಸಿ, ಆಸ್ವಾದಿಸಿ, ಅಭ್ಯಾಸ ಮಾಡಿ ತನ್ನದೇ ಆದ ಹೊಸ ಶೈಲಿಯನ್ನು ರೂಢಿಸಿಕೊಂಡಿದ್ದಾನೆ. ಮೈಸೂರು ದಸರಾ, ಬೆಂಗಳೂರಿನ ರಾಮಸೇವಾ ಮಂಡಳಿ, ಬೆಂಗಳೂರು ಗಾಯನ ಸಮಾಜ, ಎನ್‌ಸಿಪಿಎ ಮುಂಬಯಿ ಮುಂತಾದ ಪ್ರತಿಷ್ಠಿತ ವೇದಿಕೆಗಳಲ್ಲಿ ಕಛೇರಿ ನೀಡಿದ ಅನುಭವ ಇದೆ.

ಕಾರ್ತಿಕ್ 'ಲಯತರಂಗ' ಎಂಬ ಲಯವಾದ್ಯ ತಂಡದೊಂದಿಗೆ ಸಕ್ರಿಯರಾಗಿದ್ದಾರೆ. ಘಟಂನಲ್ಲಿ ಖ್ಯಾತ ಕಲಾವಿದರಾದ ಗಿರಿಧರ ಉಡುಪ, ವಾಕ್ಲಾ ಜೆಂಪಾಲ್ ಅವರೊಂದಿಗೆ ಜಾಸ್ ಸಂಗೀತದಲ್ಲೂ ಕೈಚಳಕ ತೋರುತ್ತಿದ್ದಾರೆ.. ಪೋಲೆಂಡ್, ಉಕ್ರೇನ್ ಆ್ಯಮ್‌ಸ್ಟರ್‌ಡ್ಯಾಂ, ಕತಾರ್, ಡೆನ್ಮಾರ್ಕ್, ಜರ್ಮನಿ ಮುಂತಾದ ಕಡೆಗಳಲ್ಲಿ ನಡೆದ ಜಾಸ್ ಸಮ್ಮೇಳನ ಹಾಗೂ ಇತರ ಸಂಗೀತ ಕಛೇರಿಗಳಲ್ಲಿ ಕಾರ್ತಿಕ್ ಪಿಟೀಲು ನಾದ ಅನುರಣಿಸಿದೆ.